aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Kannada (Paper 2)

EXAM	YEAR	TYPE	SUBJECT
Karnataka Class 11	2027	Sample Paper	Kannada

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)

2026-27 ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ -2

ವಿಷಯ: ಕನ್ನಡ ಭಾಷೆ **ಅಂಕಗಳು: 80**

ಅವಧಿ: 3 ಗಂಟೆಗಳು **ಒಟ್ಟು ಪ್ರಶ್ನೆಗಳು: 52**

ಸೂಚನೆ : (ಅ) ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.

ಅ- ವಿಭಾಗ

(ಅ) ಈ ಕೆಳಗಿನ ಎಲ್ಲ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10X1=10)

1. ಅಲ್ಲಮನ ಪ್ರಕಾರ 'ಬಂಡಿಯ ಹೊಡೆವವರೈವರು ಮಾನಿಸರು' ಎಂದರೆ

   ಅ) ರಸನೇಂದ್ರಿಯಗಳು ಆ) ಶ್ರವಣೇಂದ್ರಿಯಗಳು

   ಇ) ಘ್ರಾಣೇಂದ್ರಿಯಗಳು ಈ) ಪಂಚೇಂದ್ರಿಯಗಳು

2. ಭ್ರೂಣಾವಸ್ಥೆಯಲ್ಲಿರುವ ಮಗುವಿಗೆ ಇದು ವಿಷವಾಗಿದೆ

   ಅ) ಗುಳಿಗೆ ಆ) ಔಷಧಿ

   ಇ) ಪಾಶ ಈ) ನಶೆ

3. ಅಣು ಬಾಂಬುಗಳಿಂದ ನೆಲ ಹೀಗಾಗಿದೆ

   ಅ) ಬಿರುಕು ಆ) ಪ್ರಪಾತ

   ಇ) ನಾಶ ಈ) ಬಂಜೆ

4. ಹೊಲಿಗೆ ಯಂತ್ರದ ಜೊತೆಗೆ ಅಮ್ಮಿ ಕಳೆದ ಕಾಲ

   ಅ) ಅರ್ಧ ಶತಮಾನ ಆ) ಒಂದು ಶತಮಾನ

   ಇ) ಕಾಲು ಶತಮಾನ ಈ) ಮುಕ್ಕಾಲು ಶತಮಾನ

5. ಧರೆ ಮೇಲೆ ಉರಿಪಾದ ಊರಿ ನಡೆದಂತೆಲ್ಲ ಕವಿಗೆ ಆಗುವ ಅನುಭವ

   ಅ) ಯಾರೋ ನನ್ನ ತಲೆಯ ಮೇಲೂ ನಡೆದಂತಾಗುತ್ತದೆ

   ಆ) ಯಾರೋ ನನ್ನ ತಲೆಯನ್ನು ನೇವರಿಸಿದಂತಾಗುತ್ತದೆ

   ಇ) ದೇವರೇ ನನ್ನ ತಲೆಯನ್ನು ತುಳಿದಂತಾಗುತ್ತದೆ

   ಈ) ದೆವ್ವ ನನ್ನ ತಲೆಯ ಮೇಲೆ ಕುಳಿತಂತಾಗುತ್ತದೆ

6. ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಇಟ್ಟವರು

   ಅ) ಬುಕ್ಕೇಗೌಡ ಆ) ಕರಿಸಿದ್ದೇಗೌಡ

   ಇ) ನರಸಿಂಹಮೂರ್ತಿ ಈ) ವೈದ್ಯಾಧಿಕಾರಿ

7. "ಕೆಟ್ಟುಹೋದ ಗಡಿಯಾರ ಕೂಡ ದಿನದಲ್ಲಿ ಎರಡು ಸಾರಿ ಸರಿಯಾದ ವೇಳೆ ಸೂಚಿಸುತ್ತದೆ."
– ಡಾ. ಎಚ್. ನರಸಿಂಹಯ್ಯನವರ ಈ ಮಾತು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ?

ಅ) ಜ್ಯೋತಿಷ್ಯದ ಅಧಿಕೃತತೆಯನ್ನು ಆ) ಜ್ಯೋತಿಷ್ಯದ ಪ್ರಶ್ನಾತೀತತೆಯನ್ನು

ಇ) ಜ್ಯೋತಿಷ್ಯದ ಟೊಳ್ಳುತನವನ್ನು ಈ) ಜ್ಯೋತಿಷ್ಯದ ಅರ್ಥಪೂರ್ಣತೆಯನ್ನು

8. ಯಾರ ಹೆಸರನ್ನು ಕೇಳಿದರೆ ಪಿಶಾಚಿಗಳು ಹೆದರುತ್ತವೆ

ಅ) ಸೈತಾನ ಆ) ಶಿವ

ಇ) ಬೋಳೇಶಂಕರ ಈ) ಕೋಡಂಗಿ

9. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು

ಅ) ಕತ್ತಿಗೆ ಆ) ಕೊಡಲಿಗೆ

ಇ) ಕೋವಿಗೆ ಈ) ಸುತ್ತಿಗೆಗೆ

10. ತಾನು ರಾಜನಾದರೆ ರಾಜ್ಯದಲ್ಲಿ ಏನೇನು ಇರುವುದಿಲ್ಲ ಎಂದು ಬೋಳೇಶಂಕರ ಹೇಳುತ್ತಾನೆ?

ಒಂದು) ಸೈನ್ಯ **ಎರಡು) ನಾಣ್ಯಗಳು**

ಮೂರು) ತೆರಿಗೆಗಳು **ನಾಲ್ಕು) ರಾಜ - ರಾಣಿ ದುಡಿಯವಂತಿಲ್ಲ**

ಅ) ಒಂದು ಮತ್ತು ಎರಡು ಮಾತ್ರ ಸರಿ ಆ) ಎರಡು ಮತ್ತು ನಾಕು ಸರಿ

ಇ) ಒಂದು ಮತ್ತು ನಾಕು ಸರಿ ಈ) ಒಂದು ,ಎರಡು ಮತ್ತು ಮೂರು ಸರಿ

(ಆ) ಬಿಟ್ಟ ಸ್ಥಳಗಳಿಗೆ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (5 X 1= 5)

(ಲುಂಬಿನಿ, ಅಂಬವ್ವ, ರಾವ್ ಸಾಹೇಬ, ಕಪಿಲವಸ್ತು, ಮೇನಕೆ, ಬ್ರಾಹ್ಮಣ)

11. ಶಾಸ್ತ್ರಿ ಮಾಸ್ತರರ ಹೆಂಡತಿಯ ಹೆಸರು _____
12. ಗೌತಮ _____ಯಲ್ಲಿ ಜನಿಸಿದನು
13. ಸರ್ಕಾರ ರಂಗರಾವ್ ಅವರಿಗೆ ನೀಡಿದ ಬಿರುದು _____
14. ಶಕುಂತಲೆಯ ತಾಯಿಯ ಹೆಸರು _____
15. ನಾಪಿತನಿಗೆ _____ನ ಮಾತಿನಲ್ಲಿ ಪರಮ ವಿಶ್ವಾಸವಿತ್ತು.

(ಇ) ಹೊಂದಿಸಿ ಬರೆಯಿರಿ **(5 X 1= 5)**

16. (ಅ) ಅಕ್ಕಮಹಾದೇವಿ	೧) ಬಸವರಾಜ ಒಕ್ಕುಂದ
(ಆ) ನಾ ಬರಿ ಭ್ರೂಣವಲ್ಲ	೨) ಚೆನ್ನಮಲ್ಲಿಕಾರ್ಜುನ
(ಇ) ಮತ್ತೆ ಸೂರ್ಯ ಬರುತ್ತಾನೆ	೩) ಎಪ್ಪೊಂದು ನಾವೆಗಳು
(ಈ) ಹೊಲಿಗೆ ಯಂತ್ರದ ಅಮ್ಮ	೪) ಗುಹೇಶ್ವರ
(ಉ) ಜೀವಕೆ ಇಂಧನ	೫) ಲೋಕೇಶ ಅಗಸನಕಟ್ಟೆ
	೬) ಜಂಗಮ ಫಕೀರನ ಜೋಳಿಗೆ

ಆ- ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ (3 X 2= 6)

17. ಮಾದೇವನ ಶಿಶುಮಕ್ಕಳ ಹೆಸರೇನು?
18. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?
19. ಮಗುವಿಗೆ ಹಣ್ಣು ತೊಡಿಸಲು ಯಾರು ಮತ್ತು ಹೇಗೆ ಬರುತ್ತಾರೆ?
20. ಸುನಾಮಿ ಹಾಡು ಕವಿತೆಯಲ್ಲಿ ಜಗಪ್ರಳಯವನ್ನು ಹೇಗೆ ಕಲ್ಪಿಸಲಾಗಿದೆ?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ (2 X 2= 4)

21. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವು ಯಾವುವು?
22. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?
23. ರಂಗರಾವ್ ಅವರ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?
24. ನಾಪಿತನು ಹುಲಿಗೆ ತನ್ನನ್ನು ಯಾರೆಂದು ಪರಿಚಯಿಸಿಕೊಂಡನು?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ (3X2= 6)

25. ಬೆಟ್ಟದ ಮೇಲಿನ ದೇವತೆಯು ಬೋಳೆಶಂಕರನ ಅಣ್ಣ- ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
26. ಕೋಡಂಗಿ ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?
27. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?
28. ಸಾವ್ಕಾರನಿಗೆ ಚಿನ್ನದ ನಾಣ್ಯಗಳನ್ನು ಮಾಡಿಕೊಡಲು ನಿರಾಕರಿಸುವಾಗ ಬೋಳೇಶಂಕರ ನೀಡಿದ ಕಾರಣಗಳೇನು?

ಇ- ವಿಭಾಗ

(ಅ) ಯಾವುದಾದರೂ ಎರಡು ಸಾಲುಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (2X3= 6)

29. ಕಾಲಿಡಲೆಡೆವಡೆಯದೆ ಕುರುಪತಿ ದಡಿಗವೆಣಂಗಳನೆ ಮೆಟ್ಟಿ ಮೆಲ್ಲನೆ ನಡೆದಂ
30. ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ
31. ನೃಪತುಂಗನೆ ಚಕ್ರವರ್ತಿ ಪಂಪನಲ್ಲಿ ಮುಖ್ಯಮಂತ್ರಿ

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (1X3=3)

32. ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರು!
33. ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ
34. ಸ್ವಾತಂತ್ರ್ಯ ಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಬದುಕು ದುಸ್ತರವಾಯಿತು.

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (1X3= 03)

35. ಈ ಕಾಡು ನದಿ ಮಣ್ಣು ದೇವರ ಕಾಯ
36. ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ.

ಈ- ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2X4= 08)

37. ದೇಹವೆಂಬ ಬಂಡಿಯನ್ನು ಹೇಗೆ ನಡೆಸಬೇಕೆಂದು ತಿಳಿಸಲಾಗಿದೆ?
38. ಚೆನ್ನಯ್ಯನಿಗೆ ಶಿವನು ಗಣಪದವಿಯನ್ನು ನೀಡಿದ ಪ್ರಸಂಗವನ್ನು ನಿರೂಪಿಸಿ.
39. ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?
40. ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೊಟ್ಟಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ.

ಅಱೆಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ

ನೆಱೆಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ಕದು ನಿಮ್ಮುಪೇಕ್ಷೆಯೆಂ
ದಱೆಯೆನಿದೆನ್ನ ಕರ್ಮವಶಮೆಂದಱೆಯೆಂ ನಿಮಗಿಂತು ಸಾವುಮೀ
ತೆಱದಿನಕಾರಣಂ ನೆಱೆಯೆ ಸಂಭವಿಸಿರ್ದುದೋ ಕುಂಭಸಂಭವಾ

ಅ) ಗಾಂಡಿವಿ ಎಂದರೆ ಯಾರು? **(1 ಅಂಕ**)
ಆ) ಪಿನಾಕಪಾಣಿ ಎಂದರೆ ಯಾರು? **(1 ಅಂಕ)**
ಇ) ದ್ರೋಣಾಚಾರ್ಯರ ಸಾವಿನ ಬಗ್ಗೆ ದುರ್ಯೋಧನನ ನಿಲುವೇನು? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1X4= 04)

41. 'ಅನಾಥ ಬಾಲಕರಾಶ್ರಮ'ವನ್ನು ಶಾಸ್ತ್ರಿ, ಮಾಸ್ತರರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?
42. ದುಶ್ಯಂತನನ್ನು ನಿರಾಕರಿಸಲು ಶಕುಂತಲೆ ಕೊಡುವ ಕಾರಣಗಳನ್ನು ತಿಳಿಸಿ.

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1X4= 04)

43. ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ?
44. ಸೈತಾನ ಬೋಳೇಶಂಕರನ ಸಹೋದರರನ್ನು ಯಾವ ವೇಷಗಳಲ್ಲಿ ಬಂದು ಹೇಗೆ ನಂಬಿಸುತ್ತಾನೆ?

ಊ- ವಿಭಾಗ
(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದೇ ನಾಲ್ಕಕ್ಕೆ ಸೂಚನೆಗೆ ಅನುಸಾರವಾಗಿ ಉತ್ತರಿಸಿ. (4X2= 8)

45. ಎರಡು ಪದಗಳನ್ನು **ಬಿಡಿಸಿ** ಬರೆಯಿರಿ.
ಅದರಿಚ್ಛೆ, ನಿನ್ನನೊಲ್ಲದೆ, ಮಹೋನ್ನತಿ
46. ಎರಡು ಪದಗಳ **ಸಮಾನಾರ್ಥಕಗಳನ್ನು** ಬರೆಯಿರಿ.
ಅಂಗನೆ, ಕಡಲು, ದೇಹ
47. ಎರಡು ಪದಗಳ **ತದ್ಭವಗಳನ್ನು** ಬರೆಯಿರಿ.
ಗ್ರಹ, ನಿತ್ಯ, ವಸತಿ
48. ಎರಡು ಪದಗಳ **ವಿರುದ್ಧಾರ್ಥಕಗಳನ್ನು** ಬರೆಯಿರಿ.
ಪವಿತ್ರ, ಉಚಿತ, ಸತ್ಯ
49. ಎರಡು **ದ್ವಿರುಕ್ತಿಗಳನ್ನು** ಬಳಸಿ ಸ್ವಂತ ವಾಕ್ಯ ರಚಿಸಿ**.**
ತಂಡ ತಂಡ, ರಾಶಿ ರಾಶಿ, ಬಗೆಬಗೆ
50. ಯಾವುದಾದರೂ ಎರಡು **ಅನ್ಯದೇಶ್ಯ ಪದಗಳನ್ನು** ಬರೆಯಿರಿ.

(ಆ) ಯಾವುದಾದರೂ ಒಂದು ವಿಷಯ ಕುರಿತು ಪ್ರಬಂಧ ಬರೆಯಿರಿ (4X1= 4)

51. ಪುಸ್ತಕಗಳ ಮಹತ್ವ

ಅಥವಾ

ಕನ್ನಡ ನಾಡು - ನುಡಿ

(ಇ) ಯಾವುದಾದರೂ ಒಂದು ವಿಷಯ ಕುರಿತು ಪತ್ರ ಬರೆಯಿರಿ (4X1= 4)

52. ಚೈತ್ರ/ಚಿರಂತ್ , ಸರ್ಕಾರಿ ಪದವಿ ಪೂರ್ವ ಕಾಲೇಜು, ಚನ್ನಪಟ್ಟಣ, ಬೆಂಗಳೂರು ದಕ್ಷಿಣ ಜಿಲ್ಲೆ-562160 ಇದನ್ನು ನಿಮ್ಮ ವಿಳಾಸ ಎಂದು ಭಾವಿಸಿ ನಿಮ್ಮ ಗೆಳೆಯ/ಗೆಳತಿಯಾದ ವರುಣ್/ರಾಧಿಕಾ, ವಿಶ್ವಚೇತನ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು-560003. ಇವರಿಗೆ ತಮ್ಮ ಶೈಕ್ಷಣಿಕ ಪ್ರವಾಸಾನುಭವವನ್ನು ಕುರಿತು ಪತ್ರ ಬರೆಯಿರಿ.

ಅಥವಾ

ಆಯಿಷಾ/ರಾಕೇಶ, ಪ್ರಥಮ ಪಿಯುಸಿ, ದೇವಿಕಾ ಪದವಿ ಪೂರ್ವ ಕಾಲೇಜು, ಹಾವೇರಿ ಜಿಲ್ಲೆ. ಇದು ನಿಮ್ಮ ವಿಳಾಸವೆಂದು ತಿಳಿದು ಹುಬ್ಬಳ್ಳಿಯಲ್ಲರುವ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ , ಹುಬ್ಬಳ್ಳಿ ಶಾಖೆ, ಹುಬ್ಬಳ್ಳಿ. ಇವರಿಗೆ ನಿಮ್ಮ ಉಳಿತಾಯ ಖಾತೆ ತೆರೆಯುವಂತೆ ಕೋರಿ ಪತ್ರ ಬರೆಯಿರಿ.